# ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಈ ಕೆಳಗೆ ಮಂಡಿಸಿರುವ ನಿಯಮ-72ರಡಿಯಲ್ಲಿ ಗಮನ ಸೆಳೆಯು ಸೂಚನೆಗೆ ಉತ್ತರ.**

ಪ್ರಶ್ನೆ: ದೇವನಹಳ್ಳಿ ತಾಲ್ಲೂಕಿನ ವಿಶ್ವನಾಥಪುರ ಗ್ರಾಮದ ಎನ್.ಹೆಚ್-207 ರಸ್ತೆಯ ಪಕ್ಕದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ ಹಲವಾರು ಗ್ರಾಮಗಳಿಂದ ದಿನನಿತ್ಯ 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಡೆದುಕೊಂಡು ಅಥವಾ ಸೈಕಲ್ ಮೂಲಕ ಹೋಗಿಬರುತ್ತಾರೆ. ಆದರೆ ಇಲ್ಲಿ ಅಂಡರ್‌ಪಾಸ್ ನಿರ್ಮಾಣ ಮಾಡದೇ ಇರುವುದರಿಂದ ಶಾಲೆಗೆ ಹೋಗುವಾಗ ಮತ್ತು ಶಾಲೆ ಬಿಟ್ಟ ನಂತರ ರಾಷ್ಟ್ರೀಯ ಹೆದ್ದಾರಿಯ ರಸ್ತೆ ದಾಟಲು ವಿದ್ಯಾರ್ಥಿಗಳು ಹರಸಾಹಸ ಪಡುತ್ತಿದ್ದಾರೆ. ಎನ್.ಹೆಚ್-207 ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿರುವುದರಿಂದ ಈ ಜಾಗದಲ್ಲಿ ವಿದ್ಯಾರ್ಥಿಗಳು ಅಪಘಾತಗಳಿಗೆ ಈಡಾಗುವ ಸಾಧ್ಯತೆಗಳು ಸಹ ಹೆಚ್ಚು. ಈ ಜಾಗದಲ್ಲಿ ಒಂದು ಅಂಡರ್ ಪಾಸ್ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಲು ಅನುಮತಿ ನೀಡುವಂತೆ ಕೋರುತ್ತೇನೆ.

ಸರ್ಕಾರದ ಉತ್ತರ:

- ರಾಷ್ಟ್ರೀಯ ಹೆದ್ದಾರಿ 207 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಯ ಕಿ.ಮೀ. 46.25 ರಿಂದ ಕಿ.ಮೀ. 46.38 ರ ವಿಶ್ವನಾಥಪುರ ಹಳ್ಳಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯು ಸ್ಥಾಪಿತವಾಗಿರುತ್ತದೆ.
- ಸದರಿ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಯ ಕರಾರು ರಿಯಾಯಿತಿ ಒಪ್ಪಂದದಂತೆ ಕಿ.ಮೀ.47.940 ರಲ್ಲಿ ವಾಹನ ಕೆಳ ಸೇತುವೆ, ಕಿ.ಮೀ.46.900 ರಿಂದ ಕಿ.ಮೀ. 48.300 ಮತ್ತು ಕಿ.ಮೀ.43.700 ರಿಂದ ಕಿ.ಮೀ. 44.740ರ ಎರಡೂ ಭಾಗದಲ್ಲಿ ಸರ್ವೀಸ್ ರಸ್ತೆ ಮತ್ತು ಕಿ.ಮೀ. 46.265 ರಲ್ಲಿ ಕಿರು ಸೇತುವೆ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಫೆಬ್ರವರಿ 2023 ರೊಳಗೆ ಪೂರ್ಣಗೊಳಿಸಬಹುದಾಗಿದೆ.
- ಮುಂದುವರೆದು, ಕಿ.ಮೀ.47.660 ರಲ್ಲಿ ಪಾದಚಾರಿ ಕೆಳ ಸೇತುವೆ ಮತ್ತು ಕಿ.ಮೀ. 48.300 ರಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡಲು Change of Scope ನಲ್ಲಿ ಅನುವು ಮಾಡಲಾಗಿದ್ದು, ರಿಯಾಯಿತಿದಾರರು ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.
- ಮೇಲೆ ತಿಳಿಸಿರುವಂತೆ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಸದರಿ ವಾಹನ ಕೆಳ ಸೇತುವೆ, ಪಾದಚಾರಿ ಕೆಳ ಸೇತುವೆ, ಕಾಲು ಮೇಲ್ಸೇತುವೆಗಳನ್ನು ರಸ್ತೆ ದಾಟಲು ಉಪಯೋಗಿಸಬಹುದಾಗಿರುತ್ತದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 432 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು